**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ .**

**ಸಿ.ಸಿ ನಂಃ 42/ 2017**

| | | |
|---|---|---|
| ಸಾಕ್ಷಿಯ ಹೆಸರಃ | ಮಂಗಳ | ಫ್ರಾಸಾಃ 5 |
| ಗಂಡನ ಹೆಸರುಃ | ಕೀರ್ತಿ ಪ್ರಸಾದ | ಚಾಸಾಃ 10 |
| ವಯಸ್ಸುಃ | 66 ವರ್ಷ | ದಿಃ 04-03-2025 |
| ಉದ್ಯೋಗಃ | ನಿವೃತ್ತ ಎ.ಎಸ್.ಐ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಕೆ.ಆರ್.ನಗರ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು 2016 ರಿಂದ 2018 ರವರೆಗೆ ಎ.ಎಸ್.ಐ. ಅಂತಾ ಸಾಲಿಗ್ರಾಮ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.08.2016 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಬೆಳಿಗ್ಗೆ 9 ಗಂಟೆಗೆ ಚಾಸಾಃ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಫಿರ್ಯಾದಿಯನ್ನು ಸ್ವೀಕರಿಸಿ ಸದರಿ ದೂರಿನ ಸಾರಾಂಶದ ಮೇರೆಗೆ ನಾನು ಆರೋಪಿತರ ವಿರುದ್ಧ ನಮ್ಮ ಠಾಣಾ ಗುನ್ನೆ ನಂ. 81/16 ರಲ್ಲಿ ಪ್ರಕರಣ ನೊಂದಾಯಿಸಿ ಪ್ರ. ವ. ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ.

ಅದೇ ದಿನ ಚಾಸಾ 8 ರವರೊಂದಿಗೆ ಘಟನಾ ಸ್ಥಳಕ್ಕೆ ಹೋಗಿ ಚಾಸಾಃ5 ಮತ್ತು 6 ರವರ ಸಮಕ್ಷಮದಲ್ಲಿ ಚಾಸಾಃ 1 ರವರು ತೋರಿಸಿಕೊಟ್ಟ ಮೇರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ಮದ್ಯಾಹ್ನ 3 ಗಂಟೆಯಿಂದ 3-45 ಗಂಟೆವರೆಗೆ ಮಾಡಿ

ಮುಗಿಸಿರುತ್ತೇನೆ ಹಾಗೂ ಚಾಸಾಃ 1, 3 ಮತ್ತು 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾಸಾ.11 ರವರಿಗೆ ಹಸ್ತಾಂತರಿಸಿರುತ್ತೇನೆ.

ನಿಪಿ.1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು, ನಿಪಿ.2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು, ಪ್ರ.ವ.ವರದಿಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಆರೋಪಿತರನ್ನು ನೋಡಿದರೆ ನಾನು ಗುರುತಿಸಬಲ್ಲೆ. ಆರೋಪಿತರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಮ್ಮ ಅರ್ಜಿಯಲ್ಲಿ ಹೇಳಿರುತ್ತಾರೆ.

**ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಡಿ ವಕೀಲರಿಂದ**

1. ಚಾಸಾ.1 ರವರು ಠಾಣೆಗೆ ಹಾಜರಾಗಿ ತಾವು ನೀಡಿದ ದೂರಿನ ಜೊತೆಗೆ ಬೇರೆ ಯಾವುದೇ ದಾಖಲೆಗಳನ್ನು ನನಗೆ ನೀಡಿರುವುದಿಲ್ಲ. ಈ ಪ್ರಕರಣ ಹೂಡುವ ಪೂರ್ವದಲ್ಲಿ ಆರೋಪಿತರ ವಿರುದ್ಧ forest offence ಪ್ರಕರಣ ದಾಖಲಿಸಿದ ಬಗ್ಗೆ ನಾನು ಮಾಹಿತಿಯನ್ನು ಕಲೆಹಾಕಿರುವುದಿಲ್ಲ. Forest offence ಪ್ರಕರಣ ದಲ್ಲಿ ಜಪ್ತಿಪಡಿಸಿಕೊಂಡ ಮರಗಳ ಬಗ್ಗೆ ನಾನು ಮಾಹಿತಿಯನ್ನು ಸಂಗ್ರಹಿಸಿರುವುದಿಲ್ಲ. ಚಾಸಾ 1 ರವರು ನೀಡಿದ ದೂರು ವಿಳಂಬವಾಗಿದ್ದು, ಸದರಿ ವಿಳಂಬದ ಬಗ್ಗೆ ನಾನು ಚಾಸಾ 1 ರವರನ್ನು ವಿಚಾರಿಸಿರುವುದಿಲ್ಲ.

2. ನಿಪಿ.2 ರ ಮಹಜರ್ ನ್ನು ನಾನು ಕಾವಲುಹೊಸೂರಿನ ಜಯರಾಮೇಗೌಡರ ಜಮೀನಿನ ಪಕ್ಕದಲ್ಲಿ ಮಾಡಿರುತ್ತೇನೆ. ಸದರಿಯವರ ಜಮೀನಿನ ಪಕ್ಕದಲ್ಲಿ ಪೂಜಾರಿ ಚೌಡನಾಯಕರವರ ಪಾಲು ಮನೆ ಇರುತ್ತದೆ. ಸದರಿ ಜಯರಾಮೇಗೌಡರನ್ನು ಮತ್ತು ಪೂಜಾರಿ ಚೌಡನಾಯಕರವರನ್ನು ವಿಚಾರಿಸಿರುವುದಿಲ್ಲ. ಸದರಿಯವರನ್ನು ವಿಚಾರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

3. ಚಾಸಾ.1, 3 ಮತ್ತು 4 ರವರ ಹೇಳಿಕೆಗಳನ್ನು ನಾನು ಕಾವಲುಹೊಸೂರು ಗ್ರಾಮದಲ್ಲಿಯೇ ಪಡೆದುಕೊಂಡಿರುತ್ತೇನೆ. ಚಾಸಾ.5 ಮತ್ತು 6 ರವರ ಘಟನಾ ಸ್ಥಳದಲ್ಲಿಯೇ ಹಾಜರಿದ್ದರು. ಆರೋಪಿತರಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ಘಟನಾ ಸ್ಥಳದಿಂದ ಪಡೆದುಕೊಂಡಿರುವುದಿಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿದಿದ್ದರೂ ಸಹ ಚಾಸಾ.1 ರಿಂದ 3 ರವರ ಮಾತು ಕೇಳಿ ಆರೋಪಿತರ ವಿರುದ್ಧ ನಾನು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ, ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಕೆ.ಆರ್.ನಗರ.